ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.

ಸಿಸಿ ನಂ.35/2022

ಫಿರ್ಯಾದುದಾರರು : ಸರಕಾರ (ಹಾನಗಲ್ ಪೊಲೀಸರಿಂದ)

ವಿರುದ್ಧ

ಆರೋಪಿ : ಸಂತೋಷ್ ಮುದಗಲ್

ಶ್ರೀಮತಿ ಅನಿತ, ಬಿ.ಎ.(ಲಾ), ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹಾನಗಲ್ ಆದ ನಾನು ಈ ಕೆಳಗೆ ಕಾಣಿಸಿರುವ:

ಸಂತೋಷ್ ಮುದಗಲ್, ತಂದೆ ಚಂದ್ರಪ್ಪ,
26 ವರ್ಷ, ಕೂಲಿ, ವಾಸಃ ಹುಲುಗಿನಕೊಪ್ಪ, ಹಾನಗಲ್ ತಾಲ್ಲೂಕು,
ಹಾಲಿವಾಸಃ ಆನಿಕೇರಿ ಹತ್ತಿರ, ಹಾನಗಲ್ ತಾಲ್ಲೂಕು.

ದೋಷಾರೋಪಣೆ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 17.07.2021 ರಂದು ಸಂಜೆ 6.00 ಗಂಟೆ ಸುಮಾರಿಗೆ ಹಾನಗಲ್ ಪೋಲೀಸ್ ಠಾಣಾ ವ್ಯಾಪ್ತಿಯ ಹಾನಗಲ್ ಪಟ್ಟಣದ ಶ್ರೀ ರೇಣುಕಾ ಡಾಬಾ ಎದುರಿನ ತಡಸ- ಗಂಗಾಮೂಲ ಟಾರ್ ರಸ್ತೆಯ ತಡಸ ಕಡೆಗೆ ಹೋಗುವ ಟಾರ್ ರಸ್ತೆಯಲ್ಲಿ ಚಾಸಾ.1 ಸಯ್ಯದ್ ಮಹಮ್ಮದ್ ಆಲಿ ಶಿರಹಟ್ಟಿರವರ ಆಟೋ ರಿಕ್ಷಾ ಸಂಖ್ಯೆ ಕೆಎ -25/ಎಎ-2310 ಅನ್ನು ಬಾಡಿಗೆ ತೆರೀಖ ಮಾಡಿಕೊಂಡು ಹುಬ್ಬಳ್ಳಿ ಹಳೆ ಬಸ್ ನಿಲ್ದಾಣದಿಂದ ಹಾನಗಲ್ ಗೆ ರಾತ್ರಿ 9.00 ಗಂಟೆಗೆ ಬಂದು ಆಟೋ ನಿಲ್ಲಿಸಲು ಹೇಳಿ ಚಾಸಾ.1 ರವರು ಆಟೋ ನಿಲ್ಲಿಸಿ ನಿಮ್ಮ ಬಳಿ ಬಾಡಿಗೆ ಕೇಳಿದಾಗ ನೀವು ಬಾಡಿಗೆಯನ್ನು ಕೊಡದೇ ಕೈಯಿಂದ ಚಾಸಾ.1 ರವರ ಕಪಾಳಕ್ಕೆ 3-4 ಬಾರಿ ಹೊಡೆದು ಅವರ ಬಲ ಹುಬ್ಬಿನ ಹತ್ತಿರ ನಿಮ್ಮ ತಲೆಯಿಂದ ಡಿಚ್ಚಿ ಹೊಡೆದು ನೋವುಂಟು ಮಾಡಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂಧರ್ಭಗಳಂದು ಆರೋಪಿಯಾದ ನೀವು ಚಾಸಾ.1 ರವರಿಗೆ ಮೇಲೆ ಹೇಳಿದಂತೆ ಹೊಡೆದು ನೋವುಂಟು ಮಾಡಿ ತಾಯಿನ ಹಡ ಬೋಸುಡಿ ಮಗನ, ಚಿನಾಲಿ ಮಗನ, ಹಲ್ಕಟ್ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂಧರ್ಭಗಳಂದು ಆರೋಪಿಯಾದ ನೀವು ಚಾಸಾ.1 ರವರಿಗೆ ಮೇಲೆ ಹೇಳಿದಂತೆ ಹೊಡೆದು ನೋವುಂಟು ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ನೀನು ಬಾಳ ನಾಟಕ ಮಾಡಿದರೆ ಇಲ್ಲಿಂದ ಹೋಗುವುದು ಕಷ್ಟ ಆಗುತ್ತದೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂಧರ್ಭಗಳಂದು ಆರೋಪಿಯಾದ ನೀವು ಚಾಸಾ.1 ರವರಿಗೆ ಮೇಲೆ ಹೇಳಿದಂತೆ ಹೊಡೆದು ನೋವುಂಟು ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿ, ಚಾಸಾ.1 ರವರ ಬಳಿಯಿದ್ದ ಆಟೋ ರಿಕ್ಷಾದ ಕೀಲಿಯನ್ನು ಕಸಿದುಕೊಂಡು ಚಾಸಾ.1 ರವರನ್ನು ದೂಡಿ ನೆಲಕ್ಕೆ ಕೆಡವಿ ರೂ.1,00,000/- ಬೆಲೆಯ ಆಟೋ ರಿಕ್ಷಾವನ್ನು ಚಾಲು ಮಾಡಿಕೊಂಡು ಸುಲಿಗೆ ಮಾಡಿಕೊಂಡು ಹೋಗಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 392 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂಧರ್ಭಗಳಂದು ಆರೋಪಿಯಾದ ನೀವು ಚಾಸಾ.1 ರವರಿಗೆ ಮೇಲೆ ಹೇಳಿದಂತೆ ಹೊಡೆದು ನೋವುಂಟು ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿ, ಚಾಸಾ.1 ರವರ ಬಳಿಯಿದ್ದ ಆಟೋ ರಿಕ್ಷಾವನ್ನು ಸುಲಿಗೆ ಮಾಡುವ ಸಲುವಾಗಿ ಮೇಲೆ ಹೇಳಿದಂತೆ ಅವರಿಗೆ ಹಲ್ಲೆ ಮಾಡಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 394 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲಾಣಿಸಿದ ಆರೋಪಣೆಯ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸುತ್ತೇನೆ ಎಂದು ಈ ಮೂಲಕ ಆಜ್ಞೆ ಮಾಡುತ್ತಿದ್ದೇನೆ.

Sd/-
(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಹಾನಗಲ್.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.

ಸಿಸಿ ನಂ. 35/2022

| | | |
|---|---|---|
| ಆಪಾದಿತನ ಹೆಸರು | : | ಸಂತೋಷ್ ಮುದಗಲ್, |
| ತಂದೆಯ ಹೆಸರು | : | ಚಂದ್ರಪ್ಪ, |
| ವಯಸ್ಸು | : | 26 ವರ್ಷ, |
| ಉದ್ಯೋಗ | : | ಕೂಲಿ, |
| ವಾಸಸ್ಥಳ | : | ಹುಲುಗಿನಕೊಪ್ಪ, ಹಾನಗಲ್ ತಾಲ್ಲೂಕು,<br>ಹಾಲಿವಾಸಃ ಆನಿಕೇರಿ ಹತ್ತಿರ, ಹಾನಗಲ್ ತಾಲ್ಲೂಕು. |

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **240** ರ ಅಡಿ ಆರೋಪಿಯ ಹೇಳಿಕೆ

ಪ್ರಶ್ನೆ1 : ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ ತಿಳಿದಿದೆ

ಪ್ರಶ್ನೆ2 : ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

ಮೇಲಾಣಿಸಿದ ಹೇಳಿಕೆಯನು ದಿನಾಂಕಃ 04.11.2022 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

Sd/-
(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ಹಾನಗಲ್.